**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು**

<u>ಸತ್ರ ಮೊಕದ್ದಮೆ ನಂಃ **43/2024**</u>

| | | |
|---|---|---|
| ಸಾಕ್ಷಿದಾರರ ಹೆಸರು | - ದರ್ಶನ್ | ಪಿಡಬ್ಲ್ಯೂ- 08 |
| ತಂದೆಯ ಹೆಸರು | - ಯುವರಾಜ್ ಅರಸ್ | ಸಿಡಬ್ಲ್ಯೂ -08 |
| ವಯಸ್ಸು | - 33 ವರ್ಷ | |
| ಉದ್ಯೋಗ | - ವ್ಯವಸಾಯ | |
| ವಾಸ ಸ್ಥಳ | - ಸಖರಾಯಪಟ್ಟಣ | |

ದಿನಾಂಕಃ 03.03.2026 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ-</u>

1. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿ ಗೊತ್ತು. ಚಾಸಾ.1 ಗೊತ್ತು. ಪ್ರಾಸಾ.1 ರಿಂದ ಪ್ರಾಸಾ.6, ಚಾಸಾ.7, ಚಾಸಾ.9, ಚಾಸಾ.10 ಮತ್ತು ಚಾಸಾ.12 ರವರು ಗೊತ್ತು.

2. ಈಗ್ಗೆ 3 ವರ್ಷಗಳ ಹಿಂದೆ ಒಂದು ದಿನ ಚಾಸಾ.1 ರವರಿಗೆ ಯಾರೋ ಹೊಡೆದು ಹೋಗಿದ್ದಾರೆ ಎಂದು ಊರಿನವರು ನನಗೆ ಫೋನ್ ಮಾಡಿ ತಿಳಿಸಿದರು. ಚಾಸಾ.1 ರವರನ್ನು ಯಾರೋ ಆ್ಯಂಬುಲೆನ್ಸ್ ನಲ್ಲಿ ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಆದರೆ ನಾನು ಚಾಸಾ.1 ರವರನ್ನು ನೋಡಲು ಅಲ್ಲಿಗೆ ಹೋಗಲಿಲ್ಲ.

3. ಚಾಸಾ.1 ರವರಿಗೆ ಯಾರು ಹೊಡೆದಿದ್ದರು ಎಂದು ನನಗೆ ಗೊತ್ತಿಲ್ಲ. ಅವರು ಆ ಬಗ್ಗೆ ಪೊಲೀಸರಿಗೆ ದೂರು ಕೊಟ್ಟಿದ್ದ ವಿಚಾರ ನನಗೆ ಗೊತ್ತಿಲ್ಲ.

**4.** ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆ ದಿಃ 23-02-2023 ರಂದು ಸಾಕ್ಷಿ ತೋರಿಸಿದ ಸ್ಥಳದಲ್ಲಿ ಪೊಲೀಸರು ಜರುಗಿಸಿದ್ದಾರೆ ಎನ್ನಲಾದ ಪಂಚನಾಮೆಯಾಗಿದ್ದು ಅದನ್ನು ಈಗಾಗಲೇ ನಿಪಿ.2 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.2(ಸಿ) ಎಂದು ಗುರುತಿಸಲಾಯಿತು.

**5.** ಈಗ್ಗೆ 3 ವರ್ಷಗಳ ಹಿಂದೆ ಪೊಲೀಸರು ನಮ್ಮ ಮನೆಯ ಬಳಿ ಬಂದು ಚಾಸಾ.1 ರವರಿಗೆ ಯಾರೋ ಹೊಡೆದು ಹೋಗಿದ್ದ ಸ್ಥಳಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಸದರಿ ಸಹಿಯನ್ನು ಪಡೆದುಕೊಂಡರು. ನಾನು ಸಹಿ ಮಾಡಿರುವ ದಾಖಲೆಯಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ ಮತ್ತು ಅದನ್ನು ಪೊಲೀಸರು ನನಗೆ ಓದಿ ಹೇಳಿಲ್ಲ. ನಾನು ಪೊಲೀಸರಿಗೆ ಸ್ಥಳವನ್ನು ತೋರಿಸಿಲ್ಲ. ನನ್ನನ್ನು ಹೊರತುಪಡಿಸಿ ಸದರಿ ದಾಖಲೆಗೆ ಬೇರೆ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಜರುಗಿಸಿಲ್ಲ ಮತ್ತು ಏನ್ನನ್ನು ಅಮಾನತುಪಡಿಸಿಕೊಂಡಿಲ್ಲ. ಮಹಜರನ್ನು ಎಷ್ಟು ಗಂಟೆಯಿಂದ ಎಷ್ಟು ಗಂಟೆಯವರೆಗೆ ಬರೆಯಲಾಯಿತು ಎಂದು ಕೇಳಿದಾಗ ಸಾಕ್ಷಿ ಬೆಳಿಗ್ಗೆ 9.00 ರಿಂದ 10.00 ಗಂಟೆ ಎನ್ನುತ್ತಾರೆ.

6. ಸಾಕ್ಷಿಗೆ ಎರಡು ಫೋಟೋಗಳನ್ನು ತೋರಿಸಲಾಗಿ ಅವುಗಳಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ

ಫೋಟೋಗಳನ್ನು ಈಗಾಗಲೇ ನಿಪಿ.3 ಮತ್ತು ಪಿ.4 ಎಂದು ಗುರುತಿಸಲಾಗಿರುತ್ತದೆ. ಪೊಲೀಸರು ಹೇಳಿದ ಮೇರೆಗೆ ಸದರಿ ಫೋಟೋಗಳಿಗೆ ನಿಂತುಕೊಂಡಿದ್ದೇನೆ. ಸದರಿ ಫೋಟೋಗಳಲ್ಲಿ ಫ್ರಾಸಾ.1 ಮತ್ತು ಫ್ರಾಸಾ.2 ರವರ ಇರುವಿಕೆ ಸಹ ಕಂಡು ಬರುತ್ತದೆ. ಸಹಿ ಮಾಡಿದ ಬಳಿಕ ನಾನು ಮನೆಗೆ ಹೋದೆನು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ-</u>

**7.** ಚಾಸಾ.1 ಮತ್ತು ಆರೋಪಿಯ ಮನೆ ಸಖರಾಯಪಟ್ಟಣದ ಅಂತರಘಟ್ಟಮ್ಮ ದೇವಸ್ಥಾನದ ಬಳಿ ಇರುವ ಅರಸುಮಕ್ಕಳ ಬೀದಿಯಲ್ಲಿ ಇವೆ ಎಂದರೆ ಸರಿ. ದಿಃ 21-02-2023 ರಂದು ರಾತ್ರಿ 9.30 ಗಂಟೆಗೆ ನಾನು, ಚಾಸಾ.9 ಮತ್ತು 10 ರವರು ಸಖರಾಯಪಟ್ಟಣದ ಅಂತರಘಟ್ಟಮ್ಮ ದೇವಸ್ಥಾನದ ಮುಂದಿನ ರಸ್ತೆಯಲ್ಲಿ ಮಾತನಾಡುತ್ತಾ ನಿಂತುಕೊಂಡಿದ್ದಿರಿ ಎಂದರೆ ಸರಿಯಲ್ಲ. ಆಗ ಸಖರಾಯಪಟ್ಟಣದ ರಂಗನಾಥ ಸ್ವಾಮಿ ದೇವಸ್ಥಾನದ ಮುಂದಿನ ರಸ್ತೆಯಿಂದ ಅರಸುಮಕ್ಕಳ ಬೀದಿ ಕಡೆಗೆ ಹೋಗುವ ರಸ್ತೆಯ ತಿರುವಿನಲ್ಲಿ ಜೋರಾಗಿ ಗಲಾಟೆಯಾಗುತ್ತಿರುವ ಶಬ್ಧ ಕೇಳಿಸಿತು ಎಂದರೆ ಸಾಕ್ಷಿ ನಾನು ಅಲ್ಲಿಗೆ ಹೋಗುವಷ್ಟರಲ್ಲಿ ಯಾರೋ ಚಾಸಾ.1 ರವರಿಗೆ ಹೊಡೆದು ಹೋಗಿದ್ದರು ಎನ್ನುತ್ತಾರೆ. ಆಗ ನಾವು ಸದರಿ ಸ್ಥಳಕ್ಕೆ ಹೋಗಿ ನೋಡಿದಾಗ ಆರೋಪಿಯು ಚಾಸಾ.1 ರವರನ್ನು ಕುರಿತು, ನನಗೆ ಪದೇ ಪದೇ ತೊಂದರೆ ಕೊಡುತ್ತೀಯಾ, ನಿನಗೆ

ಯಾವ ಹಣ ಕೊಡಬೇಕು, ಬೋಳಿಮಗನೇ, ಸೂಳೆಮಗನೇ ಎಂದು ಬೈಯುತ್ತಿದ್ದು, ಆ ಸಮಯದಲ್ಲಿ ಚಾಸಾ.1 ರವರ ಸ್ಕೂಟರ್ ಇದ್ದು ಆರೋಪಿಯ ಬುಲೇಟ್ ಬೈಕ್ ಕೆಳಗೆ ಬಿದ್ದಿತ್ತು, ಆರೋಪಿ ನಮ್ಮನ್ನು  ನೋಡುತ್ತಿದ್ದಂತೆ ಚಾಸಾ.1 ರವರನ್ನು ಕುರಿತು, ಈ ದಿವಸ ನಿನ್ನನ್ನು ಕೊಲೆ ಮಾಡದೇ ಬಿಡುವುದಿಲ್ಲ ಎಂದು ತನ್ನ ಕೈಯಲ್ಲಿದ್ದ ಮಚ್ಚಿನಿಂದ ಚಾಸಾ.1 ರವರ ತಲೆಗೆ ಬಲವಾಗಿ ಹೊಡೆದನು ಮತ್ತು ತನ್ನ ಕೈಯಲ್ಲಿದ್ದ ಕತ್ತಿಯಿಂದ ಚಾಸಾ.1 ರವರ ಹೊಟ್ಟೆ ಮತ್ತು ಕುತ್ತಿಗೆಯ ಬಳಿ ಚುಚ್ಚಿದನು, ಆಗ ಚಾಸಾ.1 ರವರು ಕುಸಿದು ಬಿದ್ದಿದ್ದು ನಾವುಗಳು ಸೇರಿ ಗಲಾಟೆಯನ್ನು ಬಿಡಿಸಿದೆವು, ಆಗ ಆರೋಪಿಯು ತನ್ನ ಕೈಯಲ್ಲಿದ್ದ ಮಚ್ಚು ಮತ್ತು ಕತ್ತಿಯನ್ನು ಬೈಕಿನಲ್ಲಿ ಇಟ್ಟುಕೊಂಡು ಹೋದನು ಎಂದರೆ ಸಾಕ್ಷಿ ನಾನು ಅಲ್ಲಿಗೆ ಹೋಗುವಷ್ಟರಲ್ಲಿ ಯಾರೋ ಚಾಸಾ.1 ರವರಿಗೆ ಹೊಡೆದು ಹೋಗಿದ್ದರು ಆರೋಪಿ ಮತ್ತು ಚಾಸಾ.1 ರವರು ಅಲ್ಲಿ ಇರಲಿಲ್ಲ ಎನ್ನುತ್ತಾರೆ.

**8.** ಸದರಿ ಸ್ಥಳದಲ್ಲಿ ಆರೋಪಿಯ ಸ್ಕೂಟಿ ಮತ್ತು ಚಾಸಾ.1 ರವರ ಬುಲೆಟ್ ಬೈಕ್ ಬಿದ್ದಿದ್ದವು ಎಂದರೆ ಸಾಕ್ಷಿ ಎಂದರೆ ಸಾಕ್ಷಿ ನಾನು ಅಲ್ಲಿಗೆ ಹೋಗುವಷ್ಟರಲ್ಲಿ ಸದರಿ ವಾಹನಗಳನ್ನು ಯಾರೋ ಪೊಲೀಸ್ ಠಾಣೆಗೆ ತೆಗೆದುಕೊಂಡು ಹೋಗಿದ್ದರು ಎನ್ನುತ್ತಾರೆ.

**9.** ನಂತರ ನಾನು ಆಂಬ್ಯುಲೆನ್ಸ್ ಗೆ ಫೋನ್ ಮಾಡಿ ಚಾಸಾ.1 ರವರನ್ನು ಚಿಕ್ಕಮಗಳೂರಿನ ಜಿಲ್ಲಾ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲು ಮಾಡಿ ಅವರ ಸಂಬಂಧಿಕರಿಗೆ ಫೋನ್ ಮಾಡಿ ತಿಳಿಸಿದೆನು ಎಂದರೆ ಸರಿಯಲ್ಲ. ನಂತರ ಚಿಕ್ಕಮಗಳೂರಿನ ಜಿಲ್ಲಾ ಆಸ್ಪತ್ರೆಯ

ವೈದ್ಯರು ಚಾಸಾ.1 ರವರನ್ನು ಪರೀಕ್ಷಿಸಿ ಹೆಚ್ಚಿನ ಚಿಕಿತ್ಸೆಗಾಗಿ ಕಳುಹಿಸಿಕೊಟ್ಟಿದ್ದು ಅವರ ಸಂಬಂಧಿಕರು ಅವರನ್ನು ಬೆಂಗಳೂರಿನ ಸ್ಪರ್ಶ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಗಾಗಿ ದಾಖಲು ಮಾಡಿದರು ಎಂದರೆ ಸರಿ. ನಂತರ ಆ ಬಗ್ಗೆ ಚಾಸಾ.1 ರವರು ಆರೋಪಿಯ ವಿರುದ್ಧ ಪೊಲೀಸರಿಗೆ ದೂರು ಕೊಟ್ಟ ವಿಚಾರ ತಿಳಿಯಿತು ಎಂದರೆ ಸರಿಯಲ್ಲ.

**10.** ನಂತರ ದಿಃ 23-02-2023 ರಂದು ನಾನು ಪೊಲೀಸರಿಗೆ ಮೇಲೆ ಹೇಳಿದಂತೆ ಆರೋಪಿ ಕೃತ್ಯವೆಸಗಿದ್ದ ಸ್ಥಳವನ್ನು ಚಾಸಾ.2 ಮತ್ತು 3 ರವರ ಸಮಕ್ಷಮ ತೋರಿಸಿದ್ದೇನೆ ಎಂದರೆ ಸಾಕ್ಷಿ ನಾನು ಅಲ್ಲಿಗೆ ಹೋಗುವ ಮೊದಲೇ ಫ್ರಾಸಾ.1 ಮತ್ತು ಫ್ರಾಸಾ.2 ರವರು ಅಲ್ಲಿ ಇದ್ದರು ನಾನು ಸ್ಥಳವನ್ನು ತೋರಿಸಿಲ್ಲ ಎನ್ನುತ್ತಾರೆ.

**11.** ಸದರಿ ಪಂಚನಾಮೆಯ ಕಾಲಕ್ಕೆ ರಕ್ತ ಮಿಶ್ರಿತ ಮಣ್ಣು ಮತ್ತು ಸಾದಾ ಮಣ್ಣನ್ನು ಪೊಲೀಸರು ಪ್ರತ್ಯೇಕವಾಗಿ ನಮ್ಮ ಸಮಕ್ಷಮ ಕವರಿನಲ್ಲಿ ಹಾಕಿ ಅಮಾನತು ಪಡಿಸಿಕೊಂಡರು ಎಂದರೆ ಸರಿ.

12. ಹಣಕಾಸಿನ ವಿಚಾರದಲ್ಲಿ ಮತ್ತು ಹಳೆಯ ದ್ವೇಷದ ಹಿನ್ನಲೆಯಲ್ಲಿ ಆರೋಪಿ ಚಾಸಾ.1 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಆತನ ಮೇಲೆ ಹಲ್ಲೆ ಮಾಡಿದ್ದಾಗಿ ತಿಳಿಯಿತು ಎಂದರೆ ಸರಿಯಲ್ಲ.

13. ದಿನಾಂಕ 23-06-2023 ರಂದು ಪೊಲೀಸರು ನನ್ನನ್ನು ವಿಚಾರಿಸಿದ್ದಾರೆ ಎಂದರೆ ಸರಿಯಲ್ಲ. ಆಗ ನಾನು ಅವರಿಗೆ ಮೇಲಿನ ವಿಚಾರಗಳನ್ನು ತಿಳಿಸಿ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಾಕ್ಷಿಯ ಹೇಳಿಕೆಯನ್ನು ನಿಪಿ.16 ಎಂದು

ಗುರುತಿಸಲಾಯಿತು.

14. ನಾನು ಪಿ ಯು ಸಿಯವರೆಗೆ ವ್ಯಾಸಂಗ ಮಾಡಿದ್ದೇನೆ. ನೀವು ಯಾವುದೇ ದಾಖಲೆಗೆ ಅದರಲ್ಲಿ ಬರೆದಿರುವುದನ್ನು ಓದದೇ ಮತ್ತು ತಿಳಿಯದೇ ಸಹಿ ಮಾಡುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಪೊಲೀಸರು ಹೇಳಿದ್ದರಿಂದ ಮಾಡಿದ್ದೇನೆ ಎನ್ನುತ್ತಾರೆ. ಘಟನೆಯನ್ನು ನೀವು ಕಂಡಿದ್ದು ಆ ಬಗ್ಗೆ ಪೊಲೀಸರಿಗೆ ನಿಪಿ.16 ರಂತೆ ಹೇಳಿಕೆಯನ್ನು ನೀಡಿ ನಿಪಿ.2 ಮಹಜರಿಗೆ ಸ್ಥಳವನ್ನು ತೋರಿಸಿದ್ದರೂ ಸಹ ಚಾಸಾ.1 ರವರು ಈಗ ಬದುಕಿಲ್ಲದ ಕಾರಣ ಮತ್ತು ನೀವು ಆರೋಪಿಯೊಂದಿಗೆ ಶಾಮೀಲಾಗಿರುವ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಪಾಟೀ ಸವಾಲು: ಶ್ರೀ ಐ.ಎಸ್.ಟಿ. ವಕೀಲರಿಂದಃ ಆರೋಪಿ ಪರವಾಗಿಃ-</u>

15. ಚಾಸಾ.1 ರವರಿಗೆ ಚಿನ್ನದ ಬಗ್ಗೆ ವ್ಯಾಮೋಹವಿದ್ದು ಅವರು ಚಿನ್ನದ ಒಡವೆಗಳನ್ನು ಧರಿಸುತ್ತಿದ್ದು ಅವರನ್ನು ಗೋಲ್ಡ್ ಗಣೇಶ ಎಂದು ಕರೆಯಲಾಗುತ್ತಿತ್ತು ಎಂದರೆ ಸರಿ. ಸಖರಾಯಪಟ್ಟಣ ಪೊಲೀಸ್ ಠಾಣೆಯಲ್ಲಿ ಚಾಸಾ.1 ರವರ ವಿರುದ್ಧ ಹಲವು ಹೊಡೆದಾಟದ ಪ್ರಕರಣಗಳು ದಾಖಲಾಗಿದ್ದವು ಎಂದರೆ ಸರಿ. ಚಾಸಾ.1 ರವರಿಗೆ ಹೆಚ್ಚು ಶತ್ರುಗಳು ಇದ್ದರು ಎಂದರೆ ಸರಿ. ಪೊಲೀಸರು ಸ್ಥಳಕ್ಕೆ ಕರೆದಿದ್ದರು ಎಂದು ಹೇಳಿದ್ದೀರಿ ಅದು ಸೀಮೆಂಟ್ ರಸ್ತೆಯಾಗಿತ್ತು ಎಂದರೆ ಸರಿ. ನಿಪಿ.3 ಮತ್ತು ನಿಪಿ.4 ಫೋಟೋಗಳನ್ನು ಸಂಜೆ ಸಮಯದಲ್ಲಿ ತೆಗೆಯಲಾಗಿದೆ ಎಂದರೆ ಸರಿ.

16. ಚಾಸಾ.1 ರವರ ಮೇಲೆ ಯಾರು ಯಾವ ಕಾರಣಕ್ಕೆ ಹಲ್ಲೆ ಮಾಡಿದ್ದರು ಎಂದು ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಚಾಸಾ.1 ರವರು ಹೆಚ್ಚು ಚಿನ್ನದ ಆಭರಣಗಳನ್ನು ಧರಿಸುತ್ತಿದ್ದರು ಹಾಗಾಗಿ ಯಾರೋ ಚಿನ್ನಕ್ಕಾಗಿ ಅವರ ಮೇಲೆ ಹಲ್ಲೆ ಮಾಡಿರಬಹುದು ಎನ್ನುತ್ತಾರೆ. ಅದನ್ನು ಹೊರತುಪಡಿಸಿ ನನಗೆ ಬೇರೆ ಯಾವುದೇ ಮಾಹಿತಿ ಇಲ್ಲ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ